ಮೊದಲು ವಿನಂತಿ ರೂಪದ ಒತ್ತಾಯ ಮಾಡುತ್ತಿದ್ದರು. ತಾನಾಗಿ ಪರಿಚಯ ಮಾಡಿಕೊಂಡ ಸೌಭಾಗ್ಯಕ್ಕೆ ಠಾಣೆಯಲ್ಲಿ ಕುಳಿತಿರಲಿ, ಸ್ನೇಹಿತರೊಡನೆ ಕಾಫಿ ಹೀರುತ್ತಿರಲಿ ಫೋನು ಬಂದೊಡನೆ ತಡಬಡಾಯಿಸಿ ಎದ್ದು ಓಡುವ ಸರದಿ ಪಾಷಾರದಾಯಿತು. ಯಾವ ಆಟೊ ಚಾಲಕರಿಂದ ಏನು ತೊಂದರೆ ಅನುಭವಿಸಿದ್ದಳೋ ಮಹಾತಾಯಿ? ಅಥವಾ ಆಟೊ ಚಾಲಕರು ತನಗೆ ಕೊಡುವ ಮರ್ಯಾದೆ ಸಾಲದೆಂದು ಭಾವಿಸಿದ್ದಳೇನೋ?... ಆಕೆ ಆಟೊ ಹತ್ತಬೇಕೆಂದರೆ ಅದು ಎಸ್ಸೈ ಪಾಷಾ ಹಿಡಿದುಕೊಡುವ ಆಟೊನೇ ಆಗಿರಬೇಕು ಅನ್ನುವ ಪರಿಸ್ಥಿತಿ ಸೃಷ್ಟಿಯಾಯಿತು. ಎಸ್ಸೈ ಸಾಹೇಬರು ಹತ್ತಿ ಕಳಿಸಿದ ಆಟೊ ಅಂದ ಮೇಲೆ ಚಾಲಕ ಎದುರು ಮಾತನಾಡುವುದುಂಟೆ?... ಹೆಚ್ಚಿನ ದರ ಕೇಳುವಂತಿಲ್ಲ, ಸಲ್ಲಬೇಕಾದ ಮರ್ಯಾದೆಯೂ ಸಂದಂತಾಯಿತು. ರಗಳೆಯಿಲ್ಲ, ಕಿರಿಕಿರಿಗಳಿಲ್ಲ... ದಿನವೂ ಸಿಗುವ ಈ ವಿಶೇಷ ಸವಲತ್ತನ್ನು ಆಕೆ ಕಳೆದುಕೊಂಡಾಳು ಹೇಗೆ?

ಎಲ್ಲ ದಿನವೂ ಒಂದೇ ಥರ ಇರಲಾದೀತೆ? ಒಮ್ಮೊಮ್ಮೆ ಬರಲಾಗುತ್ತಿರಲಿಲ್ಲ. ಮೀಟಿಂಗುಗಳಿರುತ್ತಿದ್ದವು. ರಾತ್ರಿ ಕರ್ತವ್ಯವಿರುತ್ತಿತ್ತು. ಕೆಲವೊಮ್ಮೆ ಬೇರೆ ಕಡೆ ಡ್ಯೂಟಿಯಲ್ಲಿರುತ್ತಿದ್ದುದರಿಂದ ವಿಳಂಬವಾಗುತ್ತಿತ್ತು. ಅಂಥ ಸಮಯದಲ್ಲಿ ಆಕೆ ಸಾಕ್ಷಾತ್ ದುರ್ಗಾದೇವಿಯಾಗುತ್ತಿದ್ದಳು. ಕಂಟ್ರೋಲು ರೂಮಿಗೆ ಫೋನು ಹಚ್ಚಿ ಏರಿಯಾ ಹೆಸರು ಹೇಳಿ ಇಂಥಲ್ಲಿ ಆಟೊ ಚಾಲಕರಿಂದ ಪ್ರಯಾಣಿಕರಿಗೆ ಕಿರುಕುಳ ಉಂಟಾಗುತ್ತಿದೆ, ತಕ್ಷಣ ಸಂಚಾರ ಸಿಬ್ಬಂದಿಗೆ ಬರಹೇಳಿ ಎಂದು ದೂರು ಕೊಡುತ್ತಿದ್ದಳು. ಅತ್ತ ಕಂಟ್ರೋಲು ರೂಮಿನಿಂದ ವಯರ್‌ಲೆಸ್‌ನಲ್ಲಿ ಪಾಷಾರಿಗೆ ಮೆಸೇಜು ಹೋಗುತ್ತಿತ್ತು. ವಾಕಿಟಾಕಿ ಮೆಸೇಜೆಂದರೆ ಕೇಳಬೇಕೆ? ಸಿಬ್ಬಂದಿಗಳು, ಠಾಣಾಧಿಕಾರಿಗಳು, ಅವರ ಮೇಲಿನ ಅಧಿಕಾರಿಗಳು... ಹೀಗೆ ಎಲ್ಲರ ಕಿವಿಗೂ ಬೀಳುತ್ತಿತ್ತು. ಕೆಲವು ಮೇಲಾಧಿಕಾರಿಗಳು ಮಧ್ಯೆ ಬಾಯಿ ಹಾಕಿ 'ಯಾರ‍್ರೀ ಅಲ್ಲಿನ ಎಸ್ಸೈ... ಯಾಕೆ ಅಲ್ಲಿ ಪದೇ ಪದೇ ಸಮಸ್ಯೆ ಆಗ್ತಿದೆಯಲ್ಲಾ?... ಸ್ವಲ್ಪ ಸರಿಯಾಗಿ ನೋಡಕ್ಕೆ ಹೇಳ್ರೀ ಅವ್ರಿಗೆ... ಆಟೊದವರನ್ನು ಕಂಟ್ರೋಲು ಮಾಡಿಲ್ಲಾ ಅಂದ್ರೆ ಎಂಥಾ ಸಬ್‌ಇನ್‌ಸ್ಪೆಕ್ಟರ್ ಅವರು?' ಎಂಬ ಮರ್ಮಾಘಾತದ ಮಾತುಗಳನ್ನಾಡುತ್ತಿದರು. ಹೀಗೆ ಅತ್ತ ತರುಣಿಯೂ ಅಲ್ಲದ ಇತ್ತ ವೃದ್ಧೆಯೂ ಅಲ್ಲದ ಆ ನಡುವಯಸ್ಸಿನ ಮಹಿಳೆಯಿಂದ ಪಾಷಾರ ಅಲ್ಪ ಸ್ವಲ್ಪ ನೆಮ್ಮದಿಯೂ ಹಾಳುಬಿದ್ದುಹೋಯಿತು.

ರೋಸಿದ ಪಾಷಾ ಕೊನೆಗೊಮ್ಮೆ 'ಮೇಡಂ, ಒಬ್ಬ ಸಿಗದಿದ್ರೆ ಇನ್ನೊಬ್ಬ ಬರ್ತಾನೆ... ಹಂಗೂ ಬರಲಿಲ್ಲ ಅಂದ್ರೆ ಆಟೊ ನಂಬ್ರು ನೋಟ್ ಮಾಡ್ಕಂಡು ಆಮೇಲೆ ನನಗೆ ಕೊಟ್ರೆ ಕೇಸು ಜಡೀತೀನಿ. ಯಾಕಿಂಗ್ ನೀವು ನನಗೆ ಗಂಟು ಬಿದ್ದೀರಿ... ನಿಮ್ ದೆಸೆಯಿಂದ ನೆಮ್ದಿಯಾಗಿ ಊಟ ಮಾಡೋದು, ಕಾಫಿ ಕುಡಿಯೋದು ಅತ್ಲಾಗಿರಲಿ, ಟಾಯ್ಲೆಟ್ಟಿಗೆ ಹೋಗೋದೂ ದುಸ್ತರವಾಗಬಿಟ್ಟದೆ... ನೀವು ಬರೋ ಟೈಮಲ್ಲಿ ನಾನಿದ್ದಾಗ ನೀವು ಹೇಳ್ದಿದ್ರೂ ಆಟೊ ಹತ್ಸಿ ಕಳಿಸ್ತೀನಲ್ವಾ... ಹಂಗಂತ ನಂಗೆ ಇದೊಂದೇ ಕೆಲಸಾನಾ?... ನೀವೂ ಸ್ವಲ್ಪ ಅರ್ಥ ಮಾಡ್ಕಬೇಕು... ಒಮ್ಮೆ ಸಹಾಯ ಮಾಡಿದ ತಪ್ಪಿಗೆ ಭಾರೀ ದೊಡ್ಡ ಬೌಮಾನ ಕೊಡ್ತಾ ಇದ್ದೀರಾ... ದಯ್ಮಾಡಿ ನಮ್ ಪಾಡಿಗೆ ನಮ್ಮನ್ನ ಬಿಟ್ಬಿಡಿ...' ಅಂತ ದೀನವಾಗಿ ಕೇಳಿಕೊಂಡಿದ್ದಾರೆ. ಅಂದಿನಿಂದ ತೀರ ಕಂಟ್ರೋಲು ರೂಮಿನವರೆಗೆ ದೂರು ಹೋಗುವುದು ತಪ್ಪಿದವಾದರೂ, ಅಲ್ಲಿಂದ ವರ್ಗವಾಗುವವರೆಗೆ ಆಕೆಯಿಂದ ಪಾಷಾರಿಗೆ ಬಿಡುಗಡೆಯೇನೂ ಸಿಕ್ಕಲಿಲ್ಲವೆನ್ನಿ.

ಗೂಡ್ಸು ಆಟೊಗಳದ್ದು ಇನ್ನೊಂದು ಥರದ ಭಾಂಧವ್ಯ. ಪಕ್ಕದ ತಮಿಳುನಾಡು ಮತ್ತಿತರ ಕಡೆಗಳಿಂದ ಬೆಳೆದ ಹಣ್ಣು, ತರಕಾರಿ, ಹೂವುಗಳನ್ನು ತಂದು ವ್ಯಾಪಾರಕ್ಕಾಗಿ ಬೆಂಗಳೂರಿನ